# ಸ್ಯಾಂಚುರಿ ಆಫ್ ಟ್ರುತ್



(8ನೇ ಪುಟದಿಂದ)

ದ್ವೀಪರಾಷ್ಟ್ರ ಥಾಯ್ಲೆಂಡ್ ಬೌದ್ಧ ಮತ್ತು ಹಿಂದೂ ಸಂಸ್ಕೃತಿಯ ಸಂಗಮಸ್ಥಳ. ಅಲ್ಲಿನ ವ್ಯಾಟ್ ಮಂದಿರಗಳು, ಪ್ಯಾಟಾಂಗ್, ಅನಂತ ಮಂದಿರ ಹಾಗೂ ಕೋ ಸಮೇತ್ ಭಾರತೀಯರು ಅತ್ಯಂತ ಹೆಚ್ಚು ವೀಕ್ಷಿಸುವ ಸ್ಥಳಗಳು. ಈ ಎಲ್ಲ ಸ್ಥಳಗಳನ್ನು ವೀಕ್ಷಿಸಿದ ಬಳಿಕ ನಮ್ಮ ಥಾಯ್ ಮಾರ್ಗದರ್ಶಿ ಪ್ಯಾಟಿ, ವಿಶಿಷ್ಟ ಕೆತ್ತನೆಗಳಿಂದ ಕೂಡಿದ ಮಂದಿರವೊಂದರ ಬಗ್ಗೆ ಹೇಳಿದ್ದು ಎಲ್ಲರ ಕುತೂಹಲ ಕೆರಳಿಸಿತು. 'ಸ್ಯಾಂಚುರಿ ಆಫ್ ಟ್ರುಥ್ ಅದ್ಭುತವಾದ ಶಿಲ್ಪಕಲಾ ತಾಣ' ಎಂದಾತ ಹೇಳಿದಾಗ, ಬೌದ್ಧ ನೆಲದಲ್ಲಿ ಶಿಲ್ಪಕಲೆ ಹೀಗಿರಬಹುದೆಂಬ ನಮ್ಮ ಕುತೂಹಲ ಹೆಚ್ಚಿತು.

ಥಾಯ್ಲೆಂಡಿನ ಕೇಂದ್ರ ಸ್ಥಳವಾದ ಪಟ್ಟಾಯಾ ಮಹಾನಗರ ಗಗನಚುಂಬಿ ಕಟ್ಟಡಗಳಿಂದ ತುಂಬಿದೆ. ಪ್ರವಾಸಿ ಕೈಪಿಡಿಯ ಪ್ರಕಾರ ಸ್ಯಾಂಚುರಿ ಆಫ್ ಟ್ರುಥ್, ಪಟ್ಟಾಯಾದಿಂದ 7 ಕಿ.ಮೀ. ದೂರದಲ್ಲಿದೆ. ಇಲ್ಲಿನ ಲ್ಯಾಮ್ ರಚವತೆ ಸಮುದ್ರ ತಟದಲ್ಲಿ ಈ ಬೃಹತ್ ದೇವಾಲಯ ಸಮುಚ್ಚಯನಿರ್ಮಾಣಗೊಂಡಿದೆ.

ತಂಪಾದ ವಾತಾವರಣದ ಒಳಗಡೆ ಸಾಗುತ್ತಿದ್ದಂತೆಯೇ ಬಾನಲ್ಲಿ ನೀಲಾಕಾಶದ ನಡುವೆ ಕೊಳವೆ ಆಕಾರದಲ್ಲಿ ರಚನೆಗೊಂಡಿರುವ ಬೃಹತ್ ಕಟ್ಟಡದ ಗೋಪುರ  ಗಮನ

